ತೊಡಕದೆ, ಬಿದ್ದು ಬಿಡದಂತೆ ಕರೆದೊಯ್ದು ಚಿತೆಯ ಸಮೀಪವಾಗಿ ಒಂದು ಕಲ್ಲಿನ ಮೇಲೆ ಕೂರಿಸಿದ. ಅಲ್ಲಿ ನಡೆದ ಎಲ್ಲದಕ್ಕೂ ಜತೆಯಾದೆ, ಸಾಕ್ಷಿಯಾದೆ. ಇದೆಂಥ ವಿಪರ್ಯಾಸ? ಮಕ್ಕಳ ಮೈಗೊಂದು ಗಾಯವಾದಾಗ ನಾವು ನೋಯುತ್ತೇವೆ. ಕೂದಲು ಕೊಂಕಬಾರದೆಂದು ಕಾಪಾಡುತ್ತೇವೆ. ಈಗ... ಈ ಸುಂದರ ಸುಕೋಮಲ ಶಿಲ್ಪವನ್ನು ಇಷ್ಟೊಂದು ನಿಷ್ಠುರವಾಗಿ ಅಗ್ನಿಗೇ ಅರ್ಪಿಸಬೇಕು. ನಾವಿನ್ನೂ ಬದುಕಿರಬೇಕು.

ಎಲ್ಲ ಹೊರಟುಹೋಗಿ ಒಂದು ನಿರಾಕಾರ ನಿರ್ವಾತ ವ್ಯಾಪಿಸಿ ನಿಂತಿತ್ತು. ತೀರ ಆಪ್ತವಲಯದ ಒಂದಷ್ಟು ಮಂದಿ ಮನೆಯೊಳಗೇ ಬಿಕ್ಕಳಿಕೆಗಳ ನಡು ನಡುವೆ ಆಡುತ್ತಿದ್ದ ಪಿಸುಮಾತುಗಳನ್ನು ಬೀಸುತ್ತಿದ್ದ ಚಳಿಗಾಳಿ ಎಳೆದು ಅದೆಲ್ಲಿಗೋ ಒಯ್ಯುತ್ತಿತ್ತು. ಮೆಟ್ಟಿಲ ಮೇಲೆ ಕುಳಿತಿದ್ದೆ. ಮೇಲೇರಲಾರದ ನಿತ್ರಾಣವಿತ್ತು. ಅವಿನಾಶ ಒಳಗಿನಿಂದ ತಿಂಡಿಯ ತಟ್ಟೆ, ನೀರಿನ ಚೆಂಬು ಹಿಡಿದು ಬಂದಿದ್ದ. "ಟೀಚರೇ, ನಿನ್ನೆಯಿಂದ ನೀವೇನೂ ತಿಂದಿಲ್ಲ" ಎಂದು ಒಂದಿಷ್ಟು ತಿನ್ನಿಸುವ ಯತ್ನ ಮಾಡಿ, ನನ್ನ ಕಷ್ಟ ನೋಡಿ ಅಲ್ಲೇ ಇಟ್ಟು ಹೋದ. ತಲೆಗೆ ಎರೆದು ಕೊಂಡ ನೀರು ಇನ್ನೂ ಹಾಗೆ ಇಳಿದು ಹರಿಯುತ್ತಿತ್ತು. ಯಾಕೋ ತಲೆ ಭಾರ ತೀರ ಭಾರ ಅನಿಸಿ ಹಿಂದಕ್ಕೊರಗಿದವಳು ಅಲ್ಲಿಗೆ ಮಗಚಿದ್ದೆ. ಹಣೆಯ ಮೇಲೆ ಯಾರದೋ ಕೈಯಿತ್ತು. ಅದನ್ನೇ ಹಿಡಿದು ಮೆಲ್ಲನೆ ಎದ್ದು ಕುಳಿತೆ. ಚಂದ್ರಣ್ಣಹತ್ತಿರ ಕುಳಿತು ಆಧರಿಸಿ ಒದ್ದೆ ಕೈಯಿಂದ ತಲೆಸವರುತಿದ್ದರು. ಇಲ್ಲವೇ ಇಲ್ಲ ಅಂದುಕೊಂಡ ಜೀವಾಂಶದ ಎಳೆಯಲ್ಲಿ ಇನ್ನೂ ಒಂದಿಷ್ಟು ಸಂಚಲನ ಇದೆಯೇ ಅಂತನಿಸಿತು. ಶಬ್ದಗಳೇ ಇಲ್ಲದ ಈ ಸಂವಹನ ನನ್ನ ಪಾಲಿಗೆ ಅತ್ಯಮೂಲ್ಯವಾಗಿತ್ತು. ಕವಿದು ಕುಳಿತ ಶೂನ್ಯದಿಂದ ಆಚೆಗೊಂದು ಬಿಂದುವಿನಲ್ಲಿ ಒತ್ತಿ ಹಿಡಿದ ಭಾವಸಾಂದ್ರತೆಯಲ್ಲಿ ಪರಸ್ಪರ ನಾಡಿಮಿಡಿತಗಳು ಅರಿತು ಉಸಿರಾದಂತೆ!

ಮತ್ತೆ ಮತ್ತೆ ಬಂದು ಭೇಟಿಯಾಗುತ್ತಿದ್ದ ಮಂದಿಯನ್ನು ಪ್ರತಿದಿನ ಮಾತಾಡಿ ಕಳಿಸುವುದೇ ಪ್ರಶ್ನೆಯಾಗಿತ್ತು. ಕೆದಕಿದ ಗಾಯ ಮತ್ತೆ ಹಸಿ ಹುಣ್ಣಾಗಿರುತ್ತಿತ್ತು. ಮರಣದ ಕಾರಣವಿನ್ನೂ ಸ್ಪಷ್ಟವಿರಲಿಲ್ಲ. ಹ್ಯಾಮರೇಜಲ್ಲ, ಅಟ್ಯಾಕಲ್ಲ, ಅದೇನೋ ಕಾರ್ಡಿಯಾಕ್ ಅರೆಸ್ಟ್ ಇರಬಹುದು ಅಂತೆಲ್ಲ ಮಾತುಗಳು ಅಂತೂ ಅನಿರೀಕ್ಷಿತ ದುರಂತ ಸಂಭವಿಸಿದೆ. ನನ್ನನ್ನು ಆದ್ಯಂತವಾಗಿ ಹಿಡಿದು ಕುಲುಕಿದುದು ಅವರು ಈ ಮನೆ ಬಿಟ್ಟು ಹೋಗುವ ಹೊಸ ಸಮಾಚಾರ. ಇದೇ ಊರಿನ ಇನ್ನೊಂದು ಬದಿಗೆ ಚಂದ್ರಣ್ಣನೇ ಖರೀದಿಸಿದ ಇನ್ನೊಂದು ಮನೆಯಿತ್ತು. 'ಇಲ್ಲಿರುವುದು ಸಾಧ್ಯವೇ ಇಲ್ಲ. ಅಲ್ಲಿಗೆ ಹೋಗೋಣ' ಅಂತಾರಂತೆ ಮಾಲಕ್ಕ. ಯಾಕೆ? ವಿನ್ಯಾಸದೊಂದಿಗೆ, ಅವನ ಅಸಂಖ್ಯ ನೆನಪುಗಳೊಂದಿಗೆ ನನ್ನನ್ನು ನನ್ನೊಬ್ಬಳನ್ನೇ ಇಲ್ಲಿ ಬಿಟ್ಟು ಹೋಗ್ತಾರಾ? ಅನನ್ಯ ಆಕಾರಗಳ ಅಗಣಿತ ಅನುಭವಗಳನ್ನು ನಾನೆಲ್ಲಿ ಅಡಗಿಸಲಿ? ನಿಷ್ಕಲ್ಮಶ ನಲ್ಮೆಯ ಆ ನಕ್ಷತ್ರವನ್ನು ಇನ್ನೆಲ್ಲಿ ಅರಸಲಿ? ಈ ಖಾಲಿಗಳನ್ನೆಲ್ಲ ಹೇಗೆ ಕಳೆಯಲಿ? ಸಾವನ್ನು ಗೆಲ್ಲುವುದಾಗಲಿಲ್ಲ. ಆದರೆ ಸಾಯದೇ ಉಳಿದವರು ಸಾವಿಗೊಂದು ಸವಾಲಾಗಿ ಬದುಕಬೇಕಲ್ಲವೇ?



ಶಾಲೆಯಿಂದ ಬಂದು ಒಬ್ಬಳೇ ಕುಳಿತಿದ್ದೆ. ಕಳಚಲಾಗದ ಒದ್ದೆಬಟ್ಟೆಯಂತೆ ಅವಚಿ ಹಿಡಿಯುವ ಸ್ಮರಣೆಗಳಿಂದ ಮುಕ್ತಿಯೇ ಇಲ್ಲ. ಭೌತಿಕವಾಗಿ ಅಥವಾ ಭಾವನಾತ್ಮಕವಾಗಿ ನಮ್ಮೊಡನೆ ಇಲ್ಲದವರನ್ನು ನಿರಂತರವಾಗಿ ನೆನೆಯುತ್ತಿರುವುದೇ ಒಂಟಿತನವೇ? ಖಾಲಿಯಾದ ಪಕ್ಕದ ಮನೆಗೆ ಬಾಡಿಗೆಗೆ ಯಾರೋ ಬಂದಿದ್ದರು. ಯಾರು ಎಂದೂ ಕೇಳಿರಲಿಲ್ಲ. ಎದೆಯ ಮರ್ಮರಗಳಲ್ಲಿ ಮರಗಟ್ಟಿದ ಮನಸ್ಸಿಗೆ ಮರುಕವೇ ಮರೆತಂತ್ತಿತು. ಆ ಕಡೆಯಿಂದ ಕೇಕೆ ಹಾಕಿದಂತಹ ಸದ್ದಾಯಿತು. ನೋಡಿದರೆ ಮೂರುವರುಷದ ಮಗುವೊಂದು ಈ ಕಡೆಗೇ ಬರ್ತಾಯಿತ್ತು. ಕೈಯಲ್ಲಿ ಹಿಡಿದ ತಿಂಡಿಯ ತಟ್ಟೆಯೊಂದಿಗೆ ಅದರ ಅಮ್ಮ ಹಿಂಬಾಲಿಸಿ ಬಂದಿದ್ದಳು. ಓಡುತ್ತ ಹತ್ತಿರ ಬಂದ ಮಗು ಯಾವ ಅಳುಕೂ ತೋರದೆ ನನ್ನ ಮಡಿಲಿಗೇರಿ ಕೂತಿತು! ●